(ಶ್ರೀ ಹೆಚ್. ಡಿ. ದೇವೇಗೌಡ)

ಇನ್ನೊಂದು ವಿಷಯ ಈ ಕಂಟ್ರಾಕ್ಟ್ ಸಿಸ್ಟಂ ಏನಿದೆ ಇದನ್ನು ಸ್ವಲ್ಪ ನಡಿಲ ಮಾಡಬೇಕು, ಬ್ಯಾಂಕ್ ಸೆಕ್ಯೂರಿಟಿ ಕೊಟ್ಟರೆ ಸಾಲ್ವೆನ್ಸಿ ಆಗುತ್ತದೆ ಎಂಬ ವಾದ ಸರಿಯಲ್ಲ. ಡೆಪ್ಯೂಟಿ ಕಮಿಷನರು ಇಷ್ಟು ಮೊಬಲಗಿನ ಪ್ರಾಪರ್ಟಿ ಬಗ್ಗೆ ಸರ್ಟಿಫಿಕೇಟ್ ಕೊಟ್ಟರೆ ಒಪ್ಪುವುದಕ್ಕೆ ಅಡ್ಡಿ ಆತಂಕ ಏನಿದೆ ಎಂಬುದು ಗೊತ್ತಾಗುವುದಿಲ್ಲ. ಇವತ್ತಿನ ದಿವಸ ಒಂದು ರೂಪಾಯಿ ಡಿಪಾಸಿಟ್ ಮಾಡದೇ ಇರತಕ್ಕವನು, ಬಂಡವಾಳ ಇಲ್ಲದೇ ಇರತಕ್ಕವನಿಗೆ 15-20 ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟು ಮೆಷಿನರಿ ಪರ್ಚೇಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಇದರಲ್ಲಿ ಏನು ಅರ್ಥ ವಿದೆಯೋ ಗೊತ್ತಾಗಲಲ್ಲ. ಇವತ್ತು ಅದರ ಬಗ್ಗೆ ಏನು ನಿಯಮವಿದೆಯೋ ಅದನ್ನು ಬದಲಾ ವಣೆ ಮಾಡಬೇಕು. ಈಗಿನ ಕಂಟ್ರಾಕ್ಟ್ ಸಿಸ್ಟಂ ಏನಿದೆಯೋ ಅದರಲ್ಲಿ ಕೇವಲ ಸರ್ಕಾರದ ಹಣವನ್ನು ಎಕ್ಸ್‌ಪ್ಲಾಯಿಟ್ ಮಾಡುವಂತಹ ಜನರೇ ಹೆಚ್ಚಾಗಿದ್ದಾರೆ. ಅರ್ನೆಸ್ಟ್ ಮನಿಯನ್ನು ಡಿಪಾಜಿಟ್ ಮಾಡಿದ್ದರೆ ಅದನ್ನು ವಿರಿಫೈ ಮಾಡುವುದಕ್ಕಾಗಲಿ ನರಿಯಾದ ವ್ಯವಸ್ಥೆ ಇಲ್ಲ. ಆದರೆ ಕಂಟ್ರಾಕ್ಟರರಿಗೆ ಇಂಪ್ರಿಸನ್‌ಮೆಂಟ್ ಮಾಡತಕ್ಕ ಥಾದ್ದು ಇದರಲ್ಲಿ ಇಲ್ಲವಿದ್ದರೆ ಈ ದೇಶದ ಹಿತಕ್ಕೆ ಹಾಗೂ ಈ ರಾಜ್ಯದ ಹಿತಕ್ಕೆ ಧಕ್ಕೆ ತರುವಂಥಾದ್ದು ಆಗಿದೆ. ಆದರಿಂದ ಬಹಳ ವಾಗಿ ರಾಜ್ಯಕ್ಕೆ ಅನ್ಯಾಯವಾಗುತ್ತದೆ. ಹೇಗಾದರೂ ಆಗಲಿ, ಅಂತಹ ತಪ್ಪಿತಸ್ಥರಿಗೆ ಇಂಪ್ರಿಸನ್‌ಮೆಂಟ್ ಕೊಡುವಂಥ ಒಂದು ಕಾನೂನು ಇದರಲ್ಲಿ ಮಾಡದಿದ್ದರೆ ಈ ಹಾರ್ದ್ಯವನ್ನು ನಿಜವಾಗಿ ಪರಿಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ ಇಂಜಿನಿಯರಿಂಗ್ ಡಿಗ್ರಿ ಹೋಲ್ಡರ್ಸ್ ಡಿಪ್ಲೊಮಾ ಹೋಲ್ಡರ್ಸ್ ಇದ್ದಾರೆ. ಅವರು ತಂತಮ್ಮ ಇರಾಖೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಕಂಟ್ರಾಕ್ಟ್ ಕೊಡುವ ಬಗ್ಗೆ ತಮ್ಮ ನಿಲುವನ್ನು ಬದಲಾಯಿಸಬೇಕು. ಈಗ ಕಂಟ್ರಾಕ್ಟ್ ಮಾಡುವವರಿಗೆ ಶಕ್ತಿ, ಅರ್ಹತೆ ಇದೆಯೇ ಎಂಬುದನ್ನು ನೋಡಬೇಕು. ಸುಮ್ಮನೆ ವರ್ಕ್ ಇನ್‌ಸ್ಪೆಕ್ಟರ್ಸ್ ಎಂದು ಶಿಕ್ಷಣವಿಲ್ಲದ ಹೊನಬರನ್ನು ನೇಮಕ ಮಾಡುವುದಕ್ಕೆ ಬದಲು ಡಿಗ್ರಿ ಮತ್ತು ಡಿಪ್ಲೊಮಾ ಹೋಲ್ಡರ್ಸ್ ಆಗಿರುವವರನ್ನು ನೇಮಕಮಾಡುವುದು ಸೂಕ್ತವೆಂದು ನಾನು ತಿಳಿಸುತ್ತೇನೆ. ನಾನು ಇನ್ನೂ ಮಾತನಾಡುವುದು ಬಹಳ ವಿಷಯಗಳಿವೆ. ಆದರೆ ಕಾಲಾವಕಾಶವಿಲ್ಲ. ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಂತ್ರಿಗಳು ಇರತಕ್ಕ ಈಗಿನ ಹೆನ್ನೆರೆಯಲ್ಲಿ ನಿಷ್ಪಕ್ಷಪಾತವಾಗಿ ತಪ್ಪು ಮಾಡಿದಂಥ ಅಧಿಕಾರಿಗಳ ಮೇಲೆ ಶಾಸನಬದ್ಧವಾಗಿ ಕ್ರಮ ತೆಗೆದುಕೊಳ್ಳಬೇಕು. ಒಳ್ಳೆಯ ಅಧಿಕಾರಿಗಳು ಯಾವುದೇ ಕೆಲಸದಲ್ಲಿರಲಿ ಅವರಿಗೆ ಹೆಚ್ಚಿನ ಉತ್ತೇಜನ ಕೊಟ್ಟು ಅವರ ಕೆಲಸವನ್ನು ಈ ದೇಶದ ಕಲ್ಯಾಣಕ್ಕೋಸ್ಕರ ಉಪಯೋಗಿಸಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

Mr. DEPUTY SPEAKER.—The discussion on P.W.D. Demand will be continued to-morrow. The next item on the Agenda is Half-an-hour discussion regarding Kabini Reservoir Project. The hon. member Sri H. N. Nanje Gowda, may make a short statement if he so desires.

HALF AN HOUR DISCUSSION ARISING OUT OF REPLIES TO STARRED QUESTION NO. 188 *re*: KABINI RESERVOIR PROJECT.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷರೇ, ನಾನು ಈ ದಿನ ಅರ್ಧ ಘಂಟೆ ಕಾಲದ ಚರ್ಚೆಯನ್ನು ಪ್ರಾರಂಭಮಾಡುತ್ತಿದ್ದೇನೆ. ಈಗ ನನ್ನ ಪ್ರಯತ್ನ ಸಫಲವಾಗಲಿ ಎಂಬುದಾಗಿ ಮೊದಲೇ ನಿರೀಕ್ಷೆಮಾಡುತ್ತೇನೆ. ಮಾನ್ಯ ಮಂತ್ರಿಗಳು 5ನೇ ಪಟ್ಟಿಯ 188ನೇ ಪ್ರಶ್ನೆಗೆ ಉತ್ತರ ಕೊಡುವ ಕಾಲದಲ್ಲಿ ಕಪಿನಿ ರಿಜರ್‌ವಾಯರ್ ಪ್ರಾಜೆಕ್ಟ್ ಬಗ್ಗೆ ಏನೇನು ಉತ್ತರಗಳನ್ನು ಕೊಟ್ಟರೋ ಅವು ಈ ನಭೆಯಲ್ಲಿ ಹಾಗೂ ಈ ದೇಶದ ಜನತೆಯಲ್ಲಿ ಸಂದೇಹಾಸ್ಪದವಾಗಿ ಅವುಗಳ ಬಗ್ಗೆ ಏನೇನು ಅನುಮಾನಗಳು ಇದ್ದುವೋ ಅವೆಲ್ಲವನ್ನೂ ಪರಿಹರಿಸುವುದಕ್ಕೆ ಬದಲಾಗಿ ಆ ಅನುಮಾನಗಳನ್ನೆಲ್ಲಾ ಜಾಸ್ತಿ ಮಾಡಿದ್ದಾರೆ. ಈ ಪ್ರಾಜೆಕ್ಟಿನ ವ್ಯವಹಾರ ಸರ್ಕಾರದ ಅದಕ್ಷತೆಗೆ, ಸರ್ಕಾರದ ದುರ್ವ್ಯವಹಾರಕ್ಕೆ ಕೈಗನ್ನಡಿ ಹಿಡಿದಂತಿದೆ ಎಂಬುದಾಗಿ ಹೇಳಿದರೆ ತಪ್ಪಾಗು

ವುದಿಲ್ಲ. ಅದಕ್ಕಾಗಿ ಈಗ ಈ ಚರ್ಚೆಯನ್ನು ಪ್ರಾರಂಭಮಾಡುವ ಒಂದು ಸಂದರ್ಭದಲ್ಲಿ, ನೋಟೀಸ್ ಕೊಟ್ಟ ಕಾಲದಲ್ಲಿ ಮಾನ್ಯ ಮಂತ್ರಿಗಳು ಏನನ್ನೂ ಮುಚ್ಚಿಡದೆ ನತ್ಯಾಂಶಗಳನ್ನು ವ್ಯಕ್ತಪಡಿಸಬೇಕಾದುದು ಅಗತ್ಯವಿದೆ ಎಂಬ ಭಾವನೆಯಿಂದ ಮಾಡಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಪ್ರಾಮಾಣಿಕವಾಗಿ ದೇಶದಲ್ಲಿರತಕ್ಕ ಅನುಮಾನ ನಿವಾರಣೆಯ ಬಗ್ಗೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಕೈಗೊಂಡು ಅವನ್ನು ನಿಸ್ಸಂಕೋಚವಾಗಿ ಪ್ರಾಮಾಣಿಕತೆಯಿಂದ ಉತ್ತರಿಸುತ್ತಾರೆಂಬ ನಿರೀಕ್ಷಣೆ ಇಟ್ಟುಕೊಂಡು ಹೇಳುತ್ತೇನೆ. ಮೊದಲನೆಯದಾಗಿ ಇದರ ಕಂಟ್ರಾಕ್ಟನ್ನು ನಿಜಾಮ್ ಕನ್‌ಸ್ಟ್ರಕ್ಷನ್ ಅಂಡ್ ಕಂಪನಿಯವರಿಗೆ ಕೊಟ್ಟರು. ಇಂತಿಂಥ ಮೆಷನರಿಗಳು ಇರುವವರಿಗೆ ಮಾತ್ರ ಈ ಕಂಟ್ರಾಕ್ಟ್ ಕೊಡಬೇಕೆಂಬ ನಿಯಮವಿತ್ತು. ಆ ನಿಯಮದ ಪ್ರಕಾರ ಅವರಿಗೆ ಕೊಟ್ಟಿದ್ದರೆಂಬುದಾಗಿ ನಾನು ನಿರೀಕ್ಷಣೆ ಮಾಡುತ್ತೇನೆ, ಆದರೆ ಅವರಲ್ಲಿ ಈ ಪ್ರಾಜೆಕ್ಟಿಗೆ ಬೇಕಾದಂಥ ಯಂತ್ರೋಪಕರಣಗಳು ಇಲ್ಲವೆಂದು ಹೇಳಿದಮೇರೆ ಅವರಿಗೆ ನೋಟೀಸ್ ಕೊಟ್ಟು ಆ ಕಂಟ್ರಾಕ್ಟನ್ನು ರದ್ದು ಮಾಡಿ ಅವನಿಗೆ ತಕ್ಕ ಶಿಕ್ಷೆ ಕೊಡಬಹುದಾಗಿತ್ತು. ಆದರೆ ರಾಜ್ಯ ಸರ್ಕಾರದವರು ಅವರಲ್ಲಿ ಹಣವಿಲ್ಲದೆ ಇದ್ದುದರಿಂದ ಆ ಮೆಷಿನರಿಗಳನ್ನು ತರಿಸಿಕೊಡಲು ಮುಂಗಡವಾಗಿ ಆ ಮೆಷನರಿಗಳಿಗಾಗಿ ಒಟ್ಟು 10 ಲಕ್ಷ 60 ಸಾವಿರ ರೂಪಾಯಿಗಳನ್ನು ಕೊಟ್ಟರು. ವಿದೇಶಗಳಿಂದ ಬಂದಂಥ ಮೆಷಿನರಿಗಳು ಕಪಿನಿ ಪ್ರಾಜೆಕ್ಟ್ ಏರಿಯಾವನ್ನು ತಲುಪಿತೋ ಇಲ್ಲವೋ ಎಂಬುದನ್ನು ಈ ಸಭೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಹಿಂದೆ ಉತ್ತರ ಕೊಡುವ ಕಾಲದಲ್ಲಿ ಕೆಲವು ಮೆಷನರಿಗಳು ಇಲ್ಲವೆ, ಕೆಲವನ್ನು ಕೇರಳಾಕ್ಕೆ ತೆಗೆದುಕೊಂಡು ಹೋಗಿವೆ ಎಂಬುದಾಗಿ ಹೇಳಿದರು. ಈ ಮೆಷನರಿಗಳ ವಿಷಯವಾಗಿ ಮಾನ್ಯ ಮಂತ್ರಿಗಳು ವಿವರವಾಗಿ ಹೇಳಬೇಕು. ಅವರು ತಂದಂಥ ಮೆಷನರಿಗಳೇನು, ಎಷ್ಟು ಮೆಷನರಿಗಳನ್ನು ತರಿಸಿದ್ದಾರೆ, ಅವು ಕಪಿನಿ ಜಲಾಶಯವನ್ನು ತಲುಪಿವೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಕೆಲವು ಕಪಿನಿ ಜಲಾಶಯವನ್ನು ತಲುಪಿವೆಯೆಂದು ಹೇಳಿದಮೇಲೆ ಅದರ ಹತ್ತಿರ ಹೋಗಿ ನೋಡಿ ಪರಿಶೀಲನೆಮಾಡಿರುವಂತಹ ವ್ಯಕ್ತಿ ನಾನು. ನನಗೂ ಜವಾಬ್ದಾರಿ ಇದೆ. ಅದನ್ನು ಮಾನ್ಯ ಮಂತ್ರಿಗಳೂ ಸಹ ಒಪ್ಪುತ್ತಾರೆ. ಅಲ್ಲಿ ಒಂದು ಮೆಷನರಿಯೂ ಇಲ್ಲ. ಯಾವ್ಯಾವ ಮೆಷನರಿಗಳು ಅಲ್ಲವೆ, ಕೇರಳಾಕ್ಕೆ ಯಾವ್ಯಾವ ಮೆಷನರಿಗಳನ್ನು ನಾಗಿಸಿದ್ದಾರೆ ಎಂಬುದನ್ನು ನನಗೆ ತಿಳಿಸಬೇಕು. ಅವರು ಏನು ಮಾಡಿದ್ದಾರೆಂದರೆ, ಆ ಮೆಷನರಿಗಳನ್ನು ಮಾರಾಟಮಾಡಿ ಲಕ್ಷಕ್ಕೆ ಹೆಚ್ಚಿಗೆ ಲಾಭ ಸಂಪಾದಿಸಿದ್ದಾರೆಂದು ನನಗೆ ತಿಳಿದುಬಂದಿದೆ. ಆದರಿಂದ ನಿಜವಾಗಿ ಅವರು ಮಾರಾಟ ಮಾಡಿದ್ದಾರೆಯೇ? ಸರ್ಕಾರಕ್ಕೆ 10 ಲಕ್ಷ 60 ಸಾವಿರ ರೂಪಾಯಿಗಳನ್ನು ಕಣ್ಣುಮುಚ್ಚಿಕೊಂಡು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಏನಾದರೂ ಕರಾರು ಮಾಡಿದ್ದಾರೆಯೇ? ನಿಮ್ಮ ಕರಾರಿನ ಪ್ರಕಾರ ಏನಾದರೂ ಒಪ್ಪಂದವನ್ನು ಉಲ್ಲಂಘನೆ ಮಾಡಿದ್ದಾರೆಯೇ? ಕಪಿನಿ ಜಲಾಶಯ ಯೋಜನೆ ಪೂರ್ತಿಯಾಗಿ ಮುಗಿಯುವವರೆಗೂ ಮೆಷನರಿಗಳನ್ನು ಮಾರಾಟಮಾಡಬಾರದು ಎಂಬುದಾಗಿ ಕರಾರಿನಲ್ಲಿದ್ದರೂ ಆ ಕರಾರಿನ ಪೋರ್ಷನ್ ಯಾವುದೇ ಆದರೂ ಅವರು ಮಿತಿಮೀರಿದ್ದಾರೆಯೇ ಎಂಬುದನ್ನು ಈ ಸಭೆಗೆ ತಿಳಿಸಬೇಕು. ಜೊತೆಗೆ ಅವರಿಗೆ ಹಣ ಕೊಟ್ಟ ತಾರೀಖು ಯಾವುದು? ಯಾವಾಗ ಅದು ವಸೂಲಾಯಿತು? ಯಾವ ಬಡ್ಡಿ ದರದಲ್ಲಿ ಆ ಹಣವನ್ನು ವಾಪಸ್ಸು ಪಡೆದಿರಿ? ಎಷ್ಟು ಬಡ್ಡಿ ವಸೂಲಾಯಿತು ಎಂಬುದನ್ನು ನನಗೆ ಹೇಳಬೇಕು. ಉತ್ತರ ಕೊಡುವಾಗ ಒಂದು ಮಾತನ್ನು ಒಪ್ಪಿಕೊಂಡರು. ಕೇರಳಾದಲ್ಲಿ ಮಣಿ ಅಂಡ್ ಕಂಪೆನಿ ಎಂಬುವರು ಇನ್ನೊಬ್ಬರು ಕಂಟ್ರಾಕ್ಟರ್ಸ್ ಇದ್ದಾರೆ, ಅವರು ಸರ್ಕಾರದಿಂದ ಯಾವ ರೀತಿಯಾದಂಥ ಹಕ್ಕನ್ನೂ ಪಡೆಯದೆ ಅಕ್ರಮವಾಗಿ ಜಮೀನು ಸಾಗುವಳಿ ಮಾಡುತ್ತಾ ಇದ್ದಾರೆಂಬುದು. ಆ ಕಡೆ ಕಟ್ಟಿಸಿದಂಥ ನಿದೇಶನದಲ್ಲಿ ರತಕ್ಕ ಜಮೀನನ್ನು ಬಿಡಿಸಿಕೊಳ್ಳಬೇಕಾದರೆ ಒಬ್ಬ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಇರುತ್ತಾನೆ. ಅವನು ರೈತನಿಗೆ ಕೊಡುವ ಪರಿಹಾರವನ್ನು ಕೊಟ್ಟು ಆ ಜಮೀನನ್ನು ಬಿಡಿಸಿಕೊಂಡು ಪಿ.ಡಬ್ಲ್ಯು.ಡಿ. ಕನ್ವಡಿಗೆ ಒಪ್ಪಿಸಿದ್ದಾನೆ. ಇವನು ಅದನ್ನು ಅಕ್ರಮವಾಗಿ ಸಾಗು ಮಾಡಬೇಕಾದರೆ, ಅವರ ಸಹಕಾರವಿಲ್ಲದೆ ಹೇಗೆ ಸಾಗುಮಾಡುತ್ತಾನೆ? ನಾನು ಹೋಗಿ ಆ ಸ್ಥಳವನ್ನು ಪರಿಶೀಲಿಸಿದ್ದೇನೆ. ಈ ವಿಚಾರದಲ್ಲಿ ಹೋದಸಾರಿ ಬಡ್ಜೆಟ್ ಅಧಿವೇಶನದಲ್ಲಿ ಹೇಳಿದ್ದೇನೆ. ಅದು ರಿಕಾರ್ಡ್ ಆಗಿದೆ. ರೈತರಿಗೆ ಪರಿಹಾರ ಕೊಟ್ಟು ಬಿಡಿಸಿರತಕ್ಕ ಪಿ.ಡಬ್ಲ್ಯು.ಡಿ. ಕನ್ವಡಿಯಲ್ಲಿರುವ ಜಮೀನನ್ನು ಆತ ಅಕ್ರಮವಾಗಿ ಸಾಗು ಮಾಡುತ್ತಿದ್ದಾನೆಂದು ಹೇಳಿದ್ದೆ. ಇವರು ಆ ವಿಷಯದಲ್ಲಿ ಏನೂ ಉತ್ತರ ಕೊಟ್ಟಿಲ್ಲ. ಏನು ಕ್ರಮ ತೆಗೆದುಕೊಳ್ಳುತ್ತೇವೆಂದೂ ಹೇಳಲಿಲ್ಲ. ಇವತ್ತೂ ಹೇಳುತ್ತೇನೆ. ಅವರು ಒಪ್ಪಿಕೊಂಡಿದ್ದಾರೆ. ಪಿ.ಡಬ್ಲ್ಯು.ಡಿ. ಕನ್ವಡಿಯಲ್ಲಿರತಕ್ಕ ಜಮೀನನ್ನು ಪಿ.ಡಬ್ಲ್ಯು.ಡಿ. ಅಧಿಕಾರಿಗಳ ಸಹಕಾರವಿಲ್ಲದೆ ಹೇಗೆ ಆತ ಸಾಗು ಮಾಡಬಲ್ಲ? ಎರೆಕ್ಟಿಸಿಟಿ ಡಿಪಾರ್ಟ್‌ಮೆಂಟಿನವರು ಆತ ಪಂಪುಸೆಟ್ಟು ಇಡುವುದಕ್ಕೆ ಯಾವ ರೀತಿ ವಿದ್ಯುಚ್ಛಕ್ತಿ ಕೊಟ್ಟರು? ಇದು ಹುಡುಗಾಟವೇ? ನಮ್ಮ ರಾಜ್ಯದಲ್ಲಿ ನಿಜವಾಗಿ ಸರ್ಕಾರ ಇದೆಯೋ ಇಲ್ಲವೋ ಎಂಬ ಬಗ್ಗೆ ವಿದೇಶೀಯರಿಗೆ ಹಾಗೂ ಸ್ವದೇಶೀಯರಿಗೆ

(ಶ್ರೀ ಎಚ್. ಎನ್. ನಂಜೇಗೌಡ)

ಅನುಮಾನ ಬರುವುದಿಲ್ಲವೇ? ಎಷ್ಟು ಎಕರೆಗಳನ್ನು ಅತ ಸಾಗು ಮಾಡುತ್ತಿದ್ದಾನೆ? ಎಷ್ಟು ವರ್ಷಗಳಿಂದ ಮಾಡುತ್ತಿದ್ದಾನೆ? ಎಷ್ಟು ಎಚ್. ಪಿ. ಇಟ್ಟಿದ್ದಾನೆ? ಇದಕ್ಕೆ ಪಿ.ಡಬ್ಲ್ಯು.ಡಿ. ಅಧಿಕಾರಿಗಳು ಇದ್ದರೂ ಏತಕ್ಕೆ ಅವರು ಇದನ್ನು ತಡೆಗಟ್ಟುವುದಕ್ಕೆ ಪ್ರಯತ್ನಮಾಡಲಿಲ್ಲ? ಇವರ ಬಗ್ಗೆ ಏನು ಕ್ರಮತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಇನ್ನೊಂದು ವಿಷಯ. ಬಹಳ ಮುಖ್ಯವಾದುದು. ಮೊನ್ನೆ ನಮ್ಮ ರೆವಿನ್ಯೂ ಮಂತ್ರಿಗಳು ಅಕ್ರಮವಾಗಿ ಸಾಗು ಮಾಡುತ್ತಿದ್ದರೂ ಅವನ್ನು ಕ್ರಮಬದ್ಧವಾಗಿ ಮಾಡಿದ್ದರಿಂದ ಎರಡು ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಬರುತ್ತಿದೆ ಎಂಬುದಾಗಿ ಹೇಳಿದರು. ಅಕ್ರಮವಾಗಿ ಸಾಗುವಳಿಯನ್ನು ಕ್ರಮಬದ್ಧವಾಗಿ ಮಾಡುವವರು ಜಮೀನನ್ನು ಕ್ರಮಬದ್ಧವಾಗಿ ಮಾಡಿದ್ದರೆ, ಕಂಟ್ರಾಕ್ಟರಿಗೆ ಅತುಳವಾದ ಪರಿಹಾರ ಕೊಟ್ಟು ಅವನನ್ನು ಬಿಡುಗಡೆ ಮಾಡುತ್ತಿದ್ದರೇ? ಆ ಅನುಮಾನವನ್ನು ಪರಿಹಾರ ಮಾಡಬೇಕು. ಆ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಉತ್ತರಿಸಬೇಕು. ಮಾನ್ಯ ಮಂತ್ರಿಗಳು ಜಾಗ್ರತೆಯಾಗಿ ಉತ್ತರಗಳನ್ನು ಕೊಡಕೂಡದು. ರಾಜ್ಯ ಸರ್ಕಾರದ ಇಂತಹ ಅನಿಷ್ಟಕಾರಕವಾದ ಅಡಳಿತಕ್ಕೆ ಇಂತಹ ವ್ಯವಹಾರಗಳೇ ಕೈಗನ್ನಡಿ. ಅಂದಮೇಲೆ ಕೈಯ್ಯಲ್ಲಿ ಕನ್ನಡಿ ಏಕೆ ಎಂದು ಯಾರೂ ಹೇಳಬೇಕಾಗಿಲ್ಲ. ಇವುಗಳೇನೂ ಗೊತ್ತಿಲ್ಲ ಎಂದು ತಾವು ಭಾವಿಸಿರಬಹುದು. ಆದರೆ ಇದು ಇಡೀ ದೇಶಕ್ಕೆಲ್ಲಾ ಗೊತ್ತಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ನಾನು ಕೇಳಿರತಕ್ಕ ಪ್ರತಿಯೊಂದು ವಿಷಯಕ್ಕೂ ನೇರವಾದ ಹಾಗೂ ಕೂಲಂಕಷವಾದ ಮತ್ತು ಪ್ರಾಮಾಣಿಕವಾದ ಉತ್ತರವನ್ನು ಒದಗಿಸುತ್ತಾರೆಂದು ನಿರೀಕ್ಷಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಅರ್ಧಗಂಟೆ ಕಾರ್ಯಾವಕಾಶದ ಚರ್ಚೆಯಲ್ಲಿ ಮಾನ್ಯ ಸದಸ್ಯರು ಕೆಲವು ಸಲಹಾಚಾರಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಮತ್ತು ಅವರ ದೀರ್ಘ ಪ್ರಾರ್ಥನೆಯಲ್ಲಿ ಪ್ರಾಮಾಣಿಕವಾದ ಉತ್ತರವನ್ನು ಒದಗಿಸಬೇಕೆಂದು ಹೇಳಿದ್ದಾರೆ. ಬಹುಶಃ ನನಗೆ ಗೊತ್ತಿರುವಹಾಗೆ ಈ ಮನೆಯಲ್ಲಾಗಲಿ ಅಥವಾ ಮೇಲ್ಮನೆಯಲ್ಲಾಗಲಿ ಸದಸ್ಯರ ಕೇಳಿಕೆಗೆ ಒಂದು ಅಪ್ರಾಮಾಣಿಕವಾದ ಉತ್ತರವನ್ನು ಒದಗಿಸತಕ್ಕ ಸಂಪ್ರದಾಯ ಯಾವತ್ತೂ ಇಲ್ಲಿ ಬೆಳೆದು ಬಂದಿಲ್ಲ. ನಮ್ಮ ಮುಂದೆ ಬರತಕ್ಕ ರಿಪೋರ್ಟುಗಳೀನಿವೆ ಅವುಗಳ ಆಧಾರದಮೇಲೆ ಉತ್ತರಗಳನ್ನು ಸಭೆಗೆ ಒದಗಿಸುವ ಮುನ್ನ ಆ ವರದಿಯಲ್ಲಿರತಕ್ಕ ವಿಚಾರಗಳನ್ನು ಚೆನ್ನಾಗಿ ಪರೀಕ್ಷೆ ಮಾಡಿ ಅದರಲ್ಲಿ ಎಷ್ಟು ಸತ್ಯವಾದುದೆಂದು ಕಂಡುಬರುವುದೋ ಅಷ್ಟನ್ನು ಮಾತ್ರ ಈ ಮನೆಯ ಸದಸ್ಯರಿಗೆ ಉತ್ತರ ರೂಪವಾಗಿ ತಿಳಿಸಲಾಗುತ್ತದೆ.

ಇನ್ನು ನಾನು ಮಾನ್ಯ ಸದಸ್ಯರು ಕೇಳಿರತಕ್ಕ ಕೆಲವು ವಿಷಯಗಳ ಬಗ್ಗೆ ತಪಶೀಲುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಕೇಳುತ್ತಿರುವಂಥ ಆ ಕಬಿನಿ ಪ್ರಾಜೆಕ್ಟಿನ ಕೆಲಸ ಮಾಡುತ್ತಿರುವ ಕಂಟ್ರಾಕ್ಟರು ಸಿಮ್ಪ್ಲೆಕ್ಸ್ ಇಂಡ್ ಕೋ ಎನ್ನತಕ್ಕವರು. ಇವರಿಗೆ ಸರ್ಕಾರದಿಂದ ಎರಡು ಸಾರ್ತಿ ಸಾಲವನ್ನು ಕೊಡರಾಗಿದೆ. ಮೊದಲನೆಯ ಸಾರ್ತಿ ಇವರಿಗೆ ಮಂಜೂರಾದ ಸಾಲ 4 ಲಕ್ಷ ರೂಪಾಯಿಗಳು. ಆ ಹಣವನ್ನು ಅವರು ಡ್ರಾ ಮಾಡಿದ್ದು ತಾರೀಖು 11ನೇ ಅಕ್ಟೋಬರ್ 1961ರಲ್ಲಿ. ಅದು ಅವರಿಗೆ ಮಂಜೂರಾದ್ದು ತಾರೀಖು 14ನೇ ಸೆಪ್ಟೆಂಬರ್ 1961ರಲ್ಲಿ. ಅವರಿಗೆ ಎರಡನೇ ಸಾರ್ತಿ ಮಂಜೂರಾದ ಸಾಲದ ಹಣ 6 ಲಕ್ಷದ 60 ಸಾವಿರ ರೂಪಾಯಿಗಳು. ಅದನ್ನು ಮಂಜೂರು ಮಾಡಿದ್ದು ತಾರಿಖು 6ನೇ ನವಂಬರ್ 1965ರಲ್ಲಿ. ಹಾಗೆ ಮಂಜೂರಾದ ಹಣವನ್ನು ಅವರು ಡ್ರಾ ಮಾಡಿದ್ದು ತಾರಿಖು 8ನೇ ಮಾರ್ಚಿ 1966ರಲ್ಲಿ. ಹೀಗೆ ಅವರಿಗೆ ಒಂದು ಸಾರ್ತಿ 4 ಲಕ್ಷ ರೂಪಾಯಿಗಳು ಮತ್ತು ಇನ್ನೊಂದು ಸಾರ್ತಿ 6 ಲಕ್ಷ 60 ಸಾವಿರ ಹೀಗೆ ಒಟ್ಟು ಅವರಿಗೆ ಸರ್ಕಾರದಿಂದ ಕೊಟ್ಟ ಸಾಲದ ಪೊತ್ತ 10 ಲಕ್ಷದ 60 ಸಾವಿರ ರೂಪಾಯಿಗಳು. ಈ ಹಣವನ್ನು ನಾವು ಅವರಿಗೆ ಕೊಟ್ಟಿದ್ದು ನಮ್ಮ ಕೆಲಸಕ್ಕೆ ಬೇಕಾಗುವ ಮೆಷಿನರಿಗಳನ್ನು ಕೊಂಡುಕೊಳ್ಳಲು ಅಡ್ವಾನ್ಸ್ ರೂಪದಲ್ಲಿ ಕೊಡಲಾಗಿತ್ತು. ಹೀಗೆ ಕಂಟ್ರಾಕ್ಟರುಗಳಿಗೆ ಮೆಷಿನರಿಗಳನ್ನು ಕೊಳ್ಳಲು ಸಾಲದ ರೂಪದಲ್ಲಿ ಹಣವನ್ನು ಅಡ್ವಾನ್ಸ್ ಆಗಿ ಕೊಡತಕ್ಕ ಪದ್ಧತಿ ಹೊಸದೇನೂ ಅಲ್ಲ. ಈ ಪದ್ಧತಿಯನ್ನು ಅನೇಕ ದಿನಗಳಿಂದ ಅನುಸರಿಸಿಕೊಂಡು ಬಂದಿದ್ದಾರೆ. ನಮ್ಮ ಕೆಲಸ ಕಾರ್ಯಗಳು ಬಹಳ ತೀವ್ರಗತಿಯಿಂದ ಸಾಗಬೇಕಾಗಿದ್ದರೆ ಮೆಷಿನರಿಗಳು ಬಹಳ ಅಗತ್ಯ. ಆದರೆ ಆ ಮೆಷಿನರಿಗಳಿಗೆಲ್ಲಾ ಸರ್ಕಾರದವರು ಹಣವನ್ನು ಖರ್ಚುಮಾಡುವುದಕ್ಕೆ ಆಗುವುದಿಲ್ಲ. ಆದರೆ ಯಾವ್ಯಾವ ಕಂಟ್ರಾಕ್ಟರು ಮೆಷಿನರಿಗಳನ್ನು ತಂದು ಕೆಲಸ ಮಾಡುವುದಕ್ಕೆ ಮುಂದೆ ಬರುತ್ತಾರೋ ಅಂಥವರಿಗೆ ನಾವು ಕೊಡತಕ್ಕ ಸಾಲದ ಹಣವೇನಿದೆ ಅದಕ್ಕೆ ಯಾವ ಒಂದು ಧಕ್ಕೆಯೂ ಬಾರದಂತೆ ನೋಡಿಕೊಂಡು ಅವರಿಗೆ ಹಣವನ್ನು ಸಾಲದ ರೂಪದಲ್ಲಿ ಕೊಡಲಾಗಿದೆ. ಅವರು ನಮ್ಮಿಂದ ಹಣವನ್ನು ಸಾಲ

ಪಡೆದ ಕೂಡಲೆ ಮೊದಲು 3 ಸ್ಕ್ರೇಪರುಗಳನ್ನೂ ಒಂದು ಡೋಜರನ್ನೂ ಕೊಂಡು ತಂದರು. ಅನಂತರ ಎರಡನೇ ಅವರ್ತಿಗೆ ಅವರು ಒಂದು ಡೋಜರನ್ನೂ ಮತ್ತು ಒಂದು ಸ್ಕ್ರೇಪರನ್ನೂ ಕೊಂಡು ತಂದಿದ್ದಾರೆ. ಹೀಗೆ ಅವರು ಒಟ್ಟು 4 ಸ್ಕ್ರೇಪರುಗಳನ್ನೂ 2 ಡೋಜರುಗಳನ್ನೂ ಕೊಂಡಿದ್ದಾರೆ. ನಾವು ಅವರಿಗೆ ಈ ಸಾಮಾನುಗಳನ್ನು ಕೊಳ್ಳಲು ಮೊದಲನೇ ಸಾರ್ತಿಗೆ ಕೊಟ್ಟ 4 ಲಕ್ಷ ಹಣಕ್ಕೆ ಅಂದರೆ, 1961ರಲ್ಲಿ ಕೊಟ್ಟ ಸಾಲಕ್ಕೆ ನಾವು ಶೇಕಡ 6ರಂತೆ ಬಡ್ಡಿಯನ್ನು ಹಾಕಿದ್ದೇವೆ. ಆದಾದನಂತರ ಮತ್ತೆ 1966ರಲ್ಲಿ ಎರಡನೆ ಸಾರ್ತಿಗೆ ಕೊಟ್ಟ 6 ಲಕ್ಷದ 60 ಸಾವಿರಕ್ಕೆ ಶೇಕಡ 8ರಂತೆ ಬಡ್ಡಿಯನ್ನು ಹಾಕಿದ್ದೇವೆ. ಈಗಾಗಲೇ ಆ ಕಂಟ್ರಾಕ್ಟರ ಬಡ್ಡಿ ಸಹಿತವಾಗಿ ಅಸಲನ್ನೂ ಸೇರಿಸಿ ಒಟ್ಟು ಹಣವನ್ನು ವಾಪಸ್ ಕೊಟ್ಟುಬಿಟ್ಟಿದ್ದಾನೆ. ಅವನ್ನು ಹೀಗೆ ಒಟ್ಟು ಅಸಲು ಮತ್ತು ಬಡ್ಡಿಯನ್ನು ಪೂರ್ತಿಯಾಗಿ ವಾಪತಿ ಮಾಡಿದ್ದು ಯಾವಾಗ ಅಂದರೆ ಅದು 1966ನೇ ಫೆಬ್ರುವರಿಯಲ್ಲ. ಅನಂತರ ನಾವು ಅವನಿಗೆ ಎರಡನೇ ಸೆಟ್ ಕೊಟ್ಟ ಸಾಲವನ್ನು ಬಡ್ಡಿ ಸಹಿತ 1966ನೇ ಡಿಸೆಂಬರಿನಲ್ಲಿ ಪೂರ್ತಿಯಾಗಿ ಕೊಟ್ಟಿದ್ದಾನೆ. ಈಗ ಅವನು ನಮಗೆ ಯಾವ ಸಾಲವನ್ನಾಗಲಿ ಬಡ್ಡಿಯನ್ನಾಗಲಿ ಕೊಡತಕ್ಕದ್ದು ಇಲ್ಲ. ಇನ್ನು ಅವನು ಮೊದಲನೇ ಸಾರ್ತಿಗೆ ತಂದ ಸ್ಕ್ರೇಪರುಗಳನ್ನೂ ಮತ್ತು ಡೋಜರುಗಳನ್ನೂ ಎಲ್ಲವನ್ನೂ ನಮ್ಮ ಕೆಲಸಕ್ಕೇ ಉಪಯೋಗಿಸಬೇಕು ಎಂಬ ಷರತ್ತನ್ನು ಒಪ್ಪಂದದಲ್ಲಿ ಹಾಕಿದ್ದೆವು. ಅವುಗಳನ್ನು ನಮ್ಮ ಪ್ರಾಜೆಕ್ಟ್ ಕೆಲಸಕ್ಕೆ ಉಪಯೋಗ ಮಾಡಬೇಕೆಂದು ಹೇಳಿದ್ದೆವು. ಆದರೆ ಆ ಕಾಲಕ್ಕೆ ನಮ್ಮ ಡಿಜೈನ್ ಮತ್ತು ರೇಟುಗಳಲ್ಲಿ ಸ್ವಲ್ಪ ವ್ಯತ್ಯಾಸವಾದುದರಿಂದ ನಮ್ಮ ಕೆಲಸಗಳೆಲ್ಲಾ ಸುಮಾರು ಒಂದೂವರೆ ವರ್ಷಕಾಲ ನಿಲ್ಲಬೇಕಾಗಿ ಬಂದಿತು. ನಮ್ಮ ಕೆಲಸಗಳು ಆ ಅವಧಿಯಲ್ಲಿ ಯಾವ ಗತಿಯಿಂದಲೂ ನಡೆಯುವುದಕ್ಕಾಗಲಿಲ್ಲ. ಅಂದರೆ 1965ನೆಯ ಸೆಪ್ಟೆಂಬರ್ ತಿಂಗಳಿಂದ 1967ನೇ ಮೇವರೆಗೂ ನಮ್ಮ ಕೆಲಸಗಳು ನಡೆಯುವುದಕ್ಕಾಗಲಿಲ್ಲ. ಅದಕ್ಕೆ ಆ ರೇಟ್ ಮತ್ತು ಡಿಜೈನುಗಳಲ್ಲಿ ತಕರಾರು ಬಂದುದೇ ಕಾರಣ. ನಮಗೆ ಇನ್ನೇನಾದರೂ ಕೆಲಸಗಳಿದ್ದರೆ ಕೊಡಿ ಎಂದ. ಆದರೆ ನಮ್ಮಲ್ಲಿ ಅಂಥ ಕೆಲಸಗಳ್ಯಾವುವೂ ಇರಲಿಲ್ಲ. ಆದ್ದರಿಂದ ಆಗ ಅವನು ಆ ಮೆಷಿನರಿಗಳನ್ನು ಕೇರಳಕ್ಕೆ ತೆಗೆದುಕೊಂಡುಹೋದನು. ಅವನಿಂದ ನಮಗೆ ಅಷ್ಟರಲ್ಲೇ ಬರಬೇಕಾಗಿದ್ದ ಹಣ ಮತ್ತು ಹಣದ ಬಡ್ಡಿ ಎಲ್ಲವೂ ಬಂದಿತ್ತು. ನಮ್ಮಲ್ಲಿ ಕೆಲಸವೂ ಇರಲಿಲ್ಲ. ಆ ಕಾಲದಲ್ಲಿ ಅವನಿಗೆ ಆ ಸಾಮಾನುಗಳನ್ನು ಬೇರೆ ಕಡೆಗೆ ಒಯ್ಯಬಾರದು ಅನ್ನುವಂಥ ಮಾತನ್ನು ನಾವು ಹೇಳುದಕ್ಕೆ ಸ್ವಲ್ಪ ಸಂಕೋಚವಾಯಿತು. ಆದರೆ ಈಗ ಆ ಡಿಜೈನ್ ಮತ್ತು ರೇಟುಗಳ ತಕರಾರೆಲ್ಲಾ ತೀರ್ಮಾನವಾಗಿದೆ. ಆದುದರಿಂದ ಅವನಾಗಲೇ ಕೇರಳದಿಂದ 3 ಸ್ಕ್ರೇಪರುಗಳನ್ನೂ ಒಂದು ಡೋಜರನ್ನೂ ಇಲ್ಲಿಗೆ ತಂದು ಕೆಲಸವನ್ನು ಪ್ರಾರಂಭಮಾಡಿದ್ದಾನೆ. ನಮ್ಮ ದುಡ್ಡನ್ನೂ ವಾಪಸ್ ಕೊಟ್ಟಿದ್ದಾನೆ. ಅವನ ಒಂದು ಸ್ಕ್ರೇಪರು ಒಂದು ಡೋಜರ್ ಮಾತ್ರ ಈಗ ಕೇರಳದಲ್ಲಿದೆ. ಅದನ್ನೂ ಕೂಡ ತರಬೇಕೆಂದು ಹೇಳುತ್ತಿದ್ದೇವೆ. ಆಗಲಿ ತರುತ್ತೇನೆಂದು ಹೇಳುತ್ತಿದ್ದಾನೆ. ಅವನ್ನೂ ಕೂಡ ತಂದು ಇಲ್ಲಿನ ಕೆಲಸಗಳನ್ನು ಅತಿ ತೀವ್ರವಾಗಿ ಮಾಡಬೇಕೆಂದು ನಾವು ಆತನಿಗೆ ತಿಳಿಸಿದ್ದೇವೆ. ಆಗಲಿ ಎಂತ ಹೇಳಿದ್ದಾನೆ. ಅವನು ಬಹುಶಃ ಆ ಮೆಷಿನರಿಗಳನ್ನೂ ಸಧ್ಯದಲ್ಲೇ ತರಬಹುದು. ಆತನು ಅವನ್ನು ತರುವುದಿಲ್ಲವೆಂದೇನೂ ನಮಗೆ ತಿಳಿಸಿಲ್ಲ. ಆದುದರಿಂದ ಆತನಿಗೆ ನಾವು ಕೊಟ್ಟಿದ್ದ ಸಾಲದ ಹಣ ಪೂರ್ತಿಯಾಗಿ ನಮಗೆ ಸಂದಾಯವಾಗಿರುವಾಗ ಮತ್ತು ಆತನು ಇಲ್ಲಿ ಕೆಲಸವನ್ನು ನಡೆಸುತ್ತಿರುವಾಗ ಆ ಉಳಿದ ಮೆಷಿನರಿಗಳನ್ನು ತಾರದೆ ಇದ್ದರೆ ನಮ್ಮ ಅಗ್ರಿಮೆಂಟ್ ಪ್ರಕಾರ ಅದೇನು ಅಂಥ ಒಂದು ಅಕ್ರಮವಾಗುತ್ತದೆಯೇ ಅಥವಾ ಇಲ್ಲವೇ ಅನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ. ಅದರಲ್ಲಿ ಅವನು ಅಕ್ರಮ ನಡವಳಿಕೆ ನಡೆದಿದ್ದಾನೆಂದು ಆಗುವುದಾದರೆ ಅದರ ಪ್ರಕಾರ ಆತನಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಕಂಟ್ರಾಕ್ಟರ ಬಗ್ಗೆ ನಾವು ಯಾವ ಒಂದು ವಿನಾಕಾರಣ ಫೇವರಿಟಿಜಂ ತೋರಿಸಿಲ್ಲ. ಹಾಗೂ ಮಾನ್ಯ ಸದಸ್ಯರು ಎತ್ತಿರತಕ್ಕ ದೋಷಾರೋಪಣೆಗಳಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ ಎಂದು ಹೇಳುತ್ತೇನೆ.

ಇನ್ನು ಈ ಮಾನ್ಯ ಸದಸ್ಯರು ಇನ್ನೊಬ್ಬ ಕಂಟ್ರಾಕ್ಟರನು ಅಕ್ರಮವಾಗಿ ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ವಿಷಯವನ್ನು ಎತ್ತಿದ್ದಾರೆ. ಅದು ನಿಜ. ಆ ವಿಚಾರ ನಮ್ಮ ಗಮನಕ್ಕೂ ಬಂದಿದೆ. ಆತನು ಸುಮಾರು 37 ಎಕರೆ 29 ಗುಂಟೆ ಭೂಮಿಯನ್ನು ಅಕ್ರಮ ಸಾಗುವಳಿ ಮಾಡುತ್ತಿದ್ದಾನೆಂದು ವರದಿ ಬಂದಿದೆ. ಆ ಭೂಮಿಯನ್ನು ರೆವಿನ್ಯೂ ಬಾಬಿನಿಂದ ಪಿ.ಡಬ್ಲ್ಯು.ಡಿ. ಲ್ಯಾಂಡ್ ಅಕ್ವಿಜಿಷನ್ ಆಫೀಸರು ವರ್ಗಮಾಡತಕ್ಕ ಅವಧಿಯಲ್ಲಿ ಆ ಕಂಟ್ರಾಕ್ಟರ್ ಅದನ್ನು ಅಕ್ರಮವಾಗಿ ಸಾಗುವಳಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾನೆ. ಆ ಕಂಟ್ರಾಕ್ಟರನ ಹೆಸರು ಮಣಿ ಅಂಡ್ ಕೋ ಎಂದು. ಆ ಅಕ್ರಮ ಸಾಗುವಳಿಯನ್ನು ತಡೆಗಟ್ಟಲು ಕೂಡಲೆ ಕ್ರಮ ಕೈಗೊಳ್ಳಲು ನಾನು ರೆವಿನ್ಯೂ ಮಂತ್ರಿಗಳಿಗೆ ಆಗಲೇ ಬರೆದಿದ್ದೇನೆ. ಆದರೆ ಸ್ವಲ್ಪ ಕೆಲಸ ನಿಧಾನವಾಗಿರಬಹುದು. ಆತನ ಬಗ್ಗೆ ಏತಕ್ಕೆ ಕ್ರಮ ಕೈಗೊಳ್ಳಬಾರದು ಎಂಬುದಾಗಿ ಸಾಕಷ್ಟು

(ಶ್ರೀ ವೀರೇಂದ್ರ ಪಾಟೀಲ್)

ಕ್ರಮವನ್ನು ರೆವಿನ್ಯೂ ಇಲಾಖೆಯವರು ತೆಗೆದುಕೊಂಡಿದ್ದಾರೆ. ಆತನನ್ನು ಅಲ್ಲಿಂದ ಕೂಡಲೇ ಹೊರದೂಡಬೇಕೆಂದೂ ಆ ಭೂಮಿಯನ್ನು ಪಿ. ಡಬ್ಲ್ಯು. ಡಿ. ಗೆ ಕೊಡಬೇಕೆಂದೂ ಬರೆದಿದೆ. ಆದರೆ ನಮಗೆ ಅಲ್ಲಿಂದ ಇನ್ನೂ ಉತ್ತರ ಬಂದಿಲ್ಲ. ಆತನಿಗೆ ತಾರೀಖು 30ನೇ ಮಾರ್ಚ್ 1968 ರೊಳಗಾಗಿ ಅಲ್ಲಿಂದ ಖಾಲಿ ಮಾಡಲು ನೋಟೀಸನ್ನು ಕಳುಹಿಸಲಾಗಿದೆ. ಆ ಅವಧಿ ಮುಗಿದಕೂಡಲೆ ಅವರು ಕ್ರಮ ಕೈಗೊಳ್ಳುತ್ತಾರೆ. ಅಲ್ಲಿ ಆತನು ನಡೆಸಿರತಕ್ಕ ಅಕ್ರಮ ಸಾಗುವಳಿಯ ಬಗ್ಗೆ ರೆವಿನ್ಯೂ ಇಲಾಖೆಯವರು ಪೆನಾಲ್ಟಿ ವಗೈರೆಗಳನ್ನು ಹಾಕಿರಬಹುದು. ಮಾರ್ಚ್ 31ನೇ ತಾರೀಖು ಕಳೆದ ನಂತರ ಆತನನ್ನು ಅಲ್ಲಿಂದ ಎವಿಕ್ಟ್ ಮಾಡಲು ತೀವ್ರ ಕ್ರಮ ಕೈಗೊಳ್ಳುತ್ತಾರೆ. ಮಾನ್ಯ ಸದಸ್ಯರು ಕೇಳಿದ್ದ ಆ ಕಬಿನೀ ಪ್ರಾಜೆಕ್ಟಿನ ಬಗ್ಗೆ ನಾನು ಅವರಿಗೆ ಇಷ್ಟು ತಪಶೀಲುಗಳನ್ನು ಒದಗಿಸಿದ್ದೇನೆ, ಮತ್ತು ಇಷ್ಟು ವಿಚಾರಗಳನ್ನು ತಿಳಿಸಿದ್ದೇನೆ.

† ಶ್ರೀ ಎಚ್. ಬಿ. ಹ್ಯಾಲನಯ್ಯ.—ಸ್ಪಾಮಿ, ಒಂದು ಕ್ಲಾರಿಫಿಕೇಷನ್ ಬೇಕು. ಕಪಿನಿ ಯೋಜನೆಯು ಕೆಲಸಕ್ಕಾಗಿ ಯಂತ್ರವನ್ನು ಕೊಳ್ಳುವುದಕ್ಕೋಸ್ಕರ ಆ ಕಂಟ್ರಾಕ್ಟರಿಗೆ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ. ಆ ಕ್ಷೇತ್ರದಿಂದ ಬೇರೆ ಕಡೆ ಯಂತ್ರವನ್ನು ತೆಗೆದುಕೊಂಡು ಹೋಗ ಬೇಕಾದರೆ ಸರ್ಕಾರದಿಂದ ತೆಗೆದುಕೊಂಡಿದ್ದ ಸಾಲದ ಹಣ ಮತ್ತು ಬಡ್ಡಿಯನ್ನು ವಾಪಸ್ಸು ಕೊಟ್ಟಿದ್ದರೇ, ಮತ್ತು ಆ ಸ್ಥಳದಿಂದ ಆ ಯಂತ್ರವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಕಾದರೆ ಆ ಕಂಟ್ರಾಕ್ಟರು ಸರ್ಕಾರದ ಅನುಮತಿಯನ್ನು ಪಡೆದುಕೊಂಡಿದ್ದಾರೆಯೇ ? ಆಮೇಲೆ ಎರಡನೆಯದು, ಆ ಕಂಟ್ರಾಕ್ಟರಿಗೆ ಕೊಟ್ಟ ಹಣವನ್ನು ಅವರಿಗೆ ಕೊಡಬೇಕಾದ ಬಿಲ್ಲಿನಲ್ಲಿ ಅಡ್ಜೆಸ್ಟ್ ಮಾಡಿಕೊಂಡಿದ್ದಾರೆಯೇ ಹೇಗೋ ಗೊತ್ತಿಲ್ಲ. ಈ ಯೋಜನೆಗೆ ಸಂಬಂಧಿಸಿದ ಜಮೀನಿನಲ್ಲಿ ಒಬ್ಬ ಕಂಟ್ರಾಕ್ಟರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದು, ಆ ಜಮೀನು ರೋಕೋಪಯೋಗಿ ಇಲಾಖೆಗೆ ಇನ್ನೂ ಬಂದಿಲ್ಲ, ಅದು ರೆವಿನ್ಯೂ ಇಲಾಖೆಯ ವಶದಲ್ಲಿಯೇ ಇದೆಯೆಂದು ಆ ಬಗ್ಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ರೆವಿನ್ಯೂ ಇಲಾಖೆಗೆ ಕಾಗದ ಬರೆದು ಬಹಳ ದಿವಸ ಆಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ರೆವಿನ್ಯೂ ಇಲಾಖೆಯವರಿಗೆ ಕಾಗದ ಬರೆದಾಕ್ಷಣಕ್ಕೇ ಅವರ ಜವಾಬ್ದಾರಿ ಕಳೆದುಹೋಯಿತು ಎಂದು ಹೇಳುವುದು ಭೂಷಣವಾದ ಮಾತಲ್ಲ. ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ಅಕ್ಕಪಕ್ಕದಲ್ಲೇ ಇದ್ದಾರೆ. ಆ ಜಮೀನನ್ನು ಆಕ್ಟೈರ್ ಮಾಡಿಕೊಂಡಂತಹ ರ್ಯಾಂಡ್ ಅಕ್ವಿಜಿಷನ್ ಆಫೀಸರು ಪಿ.ಡಬ್ಲ್ಯು ಇಲಾಖೆಯವರ ವಶಕ್ಕೆ ಕೊಟ್ಟಿಲ್ಲ. ಅಂತೂ ಒಟ್ಟಿನಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮತ್ತು ರೆವಿನ್ಯೂ ಇಲಾಖೆಯವರು ಇಬ್ಬರೂ ಸೇರಿ ಅಕ್ರಮವಾಗಿ ಆ ಕಂಟ್ರಾಕ್ಟರು ಸಾಗುವಳಿ ಮಾಡುವುದಕ್ಕೆ ಅವಕಾಶ ಕೊಟ್ಟಂತಾಗಿದೆ. ಆದ್ದರಿಂದ ಇದು ಸರ್ಕಾರದ ಜವಾಬ್ದಾರಿ ಎಂದು ಒಪ್ಪಿಕೊಳ್ಳಬೇಕಾಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಈಗ ಮಾನ್ಯ ಸದಸ್ಯರು ಏನು ಕ್ಲಾರಿಫಿಕೇಷನ್ ಕೇಳಿದ್ದಾರೆ, ಇದರ ಬಗ್ಗೆ ಎಲ್ಲಾ ವಿಚಾರಗಳನ್ನೂ ನಾನು ಮುಚ್ಚುಮರೆ ಇಲ್ಲದೆ ಹೇಳಿದ್ದೇನೆ. ಅಲ್ಲಿ ಕಂಟ್ರಾಕ್ಟರು ಅಕ್ರಮವಾಗಿ ಸಾಗು ಮಾಡುತ್ತಿದ್ದರು. ಅವರ ಬಗ್ಗೆ ರೆವಿನ್ಯೂ ಇಲಾಖೆಗೆ ಬರೆದಿದ್ದೇವೆ. ಅದರಲ್ಲಿ ನಮ್ಮ ಜವಾಬ್ದಾರಿ ಏನೂ ಇಲ್ಲ ಎಂದು ನಾನು ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಹೇಳಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಕುರಿಕಾಯೋ ತೋಳ ಎಂದರೆ ಸಂಬಳ ಗಿಂಬಳ ಏನು ಬೇಡ ಹಾಗೆಯೇ ಕಾಯುತ್ತೇನೆ ಎಂದ ಹಾಗೆ ಆ ಯೋಜನೆಯ ಕಂಟ್ರಾಕ್ಟ್ ಕೆಲಸ ಕೊಟ್ಟರೆ ಆ ಕಂಟ್ರಾಕ್ಟರು ಅಕ್ರಮವಾಗಿ ರೈತರ ಜಮೀನಿನ ಒಳಗಡೆ ಪ್ರವೇಶಮಾಡಿ ಸಾಗು ಮಾಡಿದ್ದಾರೆ. ಆದ್ದರಿಂದ ಆ ಕಂಟ್ರಾಕ್ಟರು ನಂಬಿಕೆಗೆ ಅನರ್ಹರು. ಈ ಕಾರಣಕ್ಕಾಗಿ ಆ ಕಂಟ್ರಾಕ್ಟರ ಕಂಟ್ರಾಕ್ಟನ್ನು ಕ್ಯಾನ್ಸಲ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಆ ವಿಚಾರ ಗೊತ್ತಿಲ್ಲ. ಯಾರಿಗೇ ಕಂಟ್ರಾಕ್ಟು ಕೊಟ್ಟರೂ ಕೂಡ ಒಂದು ಅಗ್ರಿಮೆಂಟ್ ಮಾಡಿಕೊಳ್ಳುತ್ತೇವೆ. ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದ ಸ್ಥಳದಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿದ್ದಾರೆ ಎಂದು ಅವರ ಕಂಟ್ರಾಕ್ಟನ್ನು ಕ್ಯಾನ್ಸಲ್ ಮಾಡಿದರೆ ಅವರು ಕೋರ್ಟಿಗೆ ಹೋಗುತ್ತಾರೆ. ಎರಡನೆಯದಾಗಿ ಮತ್ತೆ ನಾವು ಆ ಕೆಲಸವನ್ನು ಮತ್ತೊಬ್ಬರಿಗೆ ಕಂಟ್ರಾಕ್ಟ್ ಕೊಡಬೇಕಾದರೆ ಟೆಂಡರ್ ಕರೆಯಬೇಕು, ಮತ್ತು ಆ ಕೆಲಸಕ್ಕೆ ಲಕ್ಷಾಂತರ ರೂಪಾಯಿಗಳನ್ನು ಇನ್ನೂ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಇದನ್ನೆಲ್ಲಾ ನಾವು ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಅವರು ಅಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿದ್ದಾರೆಂದು ಅವರ ಕಂಟ್ರಾಕ್ಟ್ ಕ್ಯಾನ್ಸಲ್ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನು ಮುಂದಾದರೂ ಕೂಡ ಕಂಟ್ರಾಕ್ಟ್ ಕೊಡುವಾಗ, ಆ ಕಂಟ್ರಾಕ್ಟರು ಅವರಿಗೆ ಕಂಟ್ರಾಕ್ಟ್ ಕೊಟ್ಟ ಜಾಗದಲ್ಲಿ ಅಕ್ರಮವಾಗಿ ಸಾಗುವಳಿ ಮಾಡಕೂಡದು ಎಂದು ಆ ಕಂಟ್ರಾಕ್ಟ್ ಅಗ್ರಿಮೆಂಟಿನಲ್ಲಿ ಕಂಡೀಷನ್ ಸೇರಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅಗ್ರಿಮೆಂಟಿನಲ್ಲಿ ಅದನ್ನು ಸೇರಿಸಬೇಕಾದ ಅವಶ್ಯಕತೆ ಇಲ್ಲ. ಇದುವರೆಗೆ ಯಾರೂ ಆ ರೀತಿ ಮಾಡುತ್ತಿರಲಿಲ್ಲ. ಅವರು ಅಕ್ರಮವಾಗಿ ಸಾಗುವಳಿ ಮಾಡಿರುವುದಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಅದರ ಬಗ್ಗೆ ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಬಿ. ದೊಡ್ಡಬೋರೇಗೌಡ.—ಆ ಕಂಟ್ರಾಕ್ಟರು ಅಲ್ಲ 39 ಎಕರೆ 26 ಗುಂಟೆ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿದ್ದಾರೆಂದು ಹೇಳಿದಿರಿ. ಅವರು ಆ ಜಮೀನಿನಲ್ಲಿ ಯಾವ ದರ್ಜೆಯ ಫಸಲನ್ನು ಮಾಡಿದ್ದಾರೆ, ಅವರು ಆ ಜಮೀನಿನಲ್ಲಿ ಹಾಕಿಕೊಂಡಿರತಕ್ಕ ಪಂಪುಸೆಟ್ಟು ಎಷ್ಟು ಹಾರ್ಸ್ ಪವರಿನದು, ಅವರು ಆ ಪಂಪು ಸೆಟ್ಟನ್ನು ಓಡಿಸಿದ್ದಕ್ಕೆ ಉಪಯೋಗಿಸಿದಂತಹ ವಿದ್ಯುಚ್ಛಕ್ತಿಗೆ ಅವರು ಚಾರ್ಜನ್ನು ಸರ್ಕಾರಕ್ಕೆ ಜಮಾ ಮಾಡಿದ್ದಾರೆಯೇ, ಮತ್ತು ಅವರು ಹಾಕಿಕೊಂಡಂತಹ ಪಂಪುಸೆಟ್ಟಿಗೆ ವಿದ್ಯುಚ್ಛಕ್ತಿ ಒದಗಿಸಲು ಯಾರು ಮಂಜೂರು ಮಾಡಿದರು ?

ಶ್ರೀ ವೀರೇಂದ್ರ ಪಾಟೀಲ್.—ತಾವು ಕೇಳತಕ್ಕ ಡೀಟೈಲ್ಸ್ ಈಗ ನನ್ನ ಹತ್ತಿರ ಇಲ್ಲ.

Mr. DEPUTY SPEAKER.—The House will now adjourn and will meet again tomorrow at 1 P.M.

———

The House adjourned at Twenty-five Minutes past Six of the Clock to meet again at One of the Clock on Tuesday, the 19th March 1968.

———

10624— GPB—500—29-6-68.